

# ಹಕ್ಕಿ ಮರಿಗಳು

■ ಕಥೆ–ಕಲೆ: **ತಮ್ಮಣ್ಣ ಬೀಗಾರ**

ಸುರೇಶನಿಗೆ ಹಕ್ಕಿ ಸುರೇಶ ಎಂದು ಯಾಕೆ ಹೆಸರು ಬಂತು ಎಂದು ನಿಮಗೆ ಗೊತ್ತಿರಬಹುದು. ಏಕೆಂದರೆ ಅವನು ಎಲ್ಲೆಲ್ಲಿ ಹಾರಾಡುತ್ತಿರುತ್ತಾನೆ ಹೇಳಲಾಗದು. ಹಾರಾಡುತ್ತಾ ನಿಮ್ಮ ಮನೆಯ ಹತ್ತಿರವೂ ಅವನು ಬಂದಿರಬಹುದು. ನಿಮ್ಮ ಮನೆಯ ಹತ್ತಿರ ಹೂದೋಟ ಬೆಳೆಸಿದ್ದೀರಾ, ಅಥವಾ ದೊಡ್ಡ ಮರಗಳು ಏನಾದರೂ ಅಲ್ಲಿ ಇವೆಯಾ? ಯಾಕೆಂದರೆ ಹೂದೋಟದಲ್ಲಿ ಹೂಗಳು ಅರಳಿದ ಹಾಗೆ ಹಕ್ಕಿಗಳೂ ಗಿಡದ ಮೇಲೆ ಬಂದು ಕೂತಿರುವುದನ್ನು ನಾವು ನೋಡಬಹುದು. ಜುಟ್ಟದ ಪಿಕಳಾರ (ಬುಲ್ ಬುಲ್) ನೀವು ನೋಡಿಯೇ ಇರುತ್ತೀರಿ. ಬೆಳಗಾದರೆ ಸಾಕು ನೀವು ಸುಮ್ಮನೆ ಎದ್ದು ಬಂದು ಪ್ರಶಾಂತವಾಗಿರುವ ಮನೆಯ ಹೂದೋಟದಲ್ಲಿ ನೋಡಿ. ಅಲ್ಲಿ ಪೀಕ್ ಪೀಕ್ ಸದ್ದು ಮಾಡುತ್ತಾ ಆ ಕಡೆ ಈ ಕಡೆ ಏನೋ ಹುಡುಕುತ್ತಿರುವ ಪಿಕಳಾರ ಕಂಡೇ ಕಾಣುತ್ತದೆ. ಅದಿನ್ನೂ ಬಂದಿಲ್ಲ ಎಂದರೆ... ಉದ್ದ ಕೊಕ್ಕಿನ ಪುಟ್ಟ ಹಕ್ಕಿ ಅಲ್ಲಿ ಇರುತ್ತದೆ. ಪುಟ್ಟ ಹಕ್ಕಿಗೆ ಅಷ್ಟುದ್ದದ ಕೊಕ್ಕೇ ಎನ್ನುವ ಹಾಗೆ ಕಾಣುವ ಈ ಹಕ್ಕಿ ಗಡಿಬಿಡಿಯಲ್ಲಿ ಹೂವಿಂದ ಹೂವಿಗೆ ಹಾರುವ ಚಂದ ಕಾಣುತ್ತೇವೆ. ಅಷ್ಟರಲ್ಲಿ ತಿಂಡಿ ಆಸೆಯಿಂದ ಕಾಗೆ ಬಂದು ಯಾವುದೋ ಒಣಕೊಂಬೆಯ ಮೇಲೆ ಕೂತಿರುತ್ತದೆ. ಅದು ಇಣಿಕಿ ಆಚೆ ಈಚೆ ತಲೆ ತಿರುಗಿಸಿ ಹುಡುಕುವ ರೀತಿಯನ್ನು ನೋಡಬೇಕೆನಿಸುತ್ತದೆ. ಆಗಲೇ ದೊಡ್ಡದಾಗಿ ಹಾಡು ಹೇಳುವ ವಿವಿಧ ರೀತಿಯಲ್ಲಿ ಕೂಗಿ ತನ್ನ ಕಡೆಗೆ ಗಮನ ಸೆಳೆಯುವ ಕೋಗಿಲೆ ಕಣ್ಣಿಗೆ ಕಾಣದಿದ್ದರೂ ತಾನೂ ಇದ್ದೇನೆ ಎಂದು ಹೇಳುತ್ತಿರುತ್ತದೆ.

ಸುರೇಶನ ಕುರಿತಾಗಿ ಹೇಳಲು ಹೊರಟಿದ್ದವನಿಗೆ ಅವನ ಹಕ್ಕಿಗಳ ಕುರಿತಾದ ಪ್ರೀತಿ ನೆನಪಾಯಿತು. ಹಾಗೆ ನೋಡಿದರೆ ಯಾರಿಗೆ ಹಕ್ಕಿಗಳ ಮೇಲೆ ಪ್ರೀತಿ ಇರುವುದಿಲ್ಲ ಹೇಳಿ. ನಾವು ಮಕ್ಕಳು ಒಂದು ರೀತಿಯಲ್ಲಿ ಹಕ್ಕಿಗಳ ಹಾಗೇ ಇರುತ್ತೇವೆ. ಎಲ್ಲಿಂದ ಎಲ್ಲಿಗೋ ಹಾರುವುದು, ಹಣ್ಣು ಕಾಳು ಅಂತ ಅಲೆಯುವುದು, ದೊಡ್ಡ ಬಯಲಿನಲ್ಲಿ ಗುಂಪಾಗಿ ಸೇರಿ ಏನೋ ಮಾಡುವುದು, ಅಪಾಯವೇನಾದರೂ ಕಂಡಾಗ ಬರ್‍ರಮೆ ಹಾರಿ ಹೋಗುವುದೆಲ್ಲ ನಾವೂ ಮಾಡುತ್ತಿರುತ್ತೇವೆ. ಸರಿ ಸರಿ ನಾನು ಸುರೇಶನ ಕುರಿತು ಹೇಳಬೇಕು.

ಸುರೇಶನ ಕಂಪಾಸ್ ಪೆಟ್ಟಿಗೆಯಲ್ಲಿ ಯಾವಾಗಲೂ ಒಂದಿಷ್ಟು ಪುಟ್ಟ ಗರಿಗಳಿರುತ್ತವೆ. ಒಂದು ಸಣ್ಣ ನವಿಲುಗರಿಯನ್ನೂ ಇಟ್ಟುಕೊಂಡಿದ್ದಾನೆ. ಅದರ ಒಂದು ಭಾಗ ಬಂಗಾರದ ಬಣ್ಣದ ಹಾಗೆ ಹೊಳೆಯುತ್ತಿರುತ್ತದೆ. ಅಲ್ಲಿರುವ ಹಸಿರು ನೀಲಿ ಎಲ್ಲ ಎಷ್ಟು ಚಂದ. ಅವನು ನವಿಲು ಗರಿಯಷ್ಟೇ ತೋರಿಸಿ ನಿಲ್ಲಿಸುವುದಿಲ್ಲ. ನವಿಲು ಗರಿ ಬಿಚ್ಚಿ ಕುಣಿಯುವಾಗ ನೀವೆಲ್ಲ ನೋಡಬೇಕು ಎಂದು ಅದನ್ನು ನೋಡಲು ಕಾತರರರಾಗುವಂತೆ ಮಾಡುತ್ತಾನೆ. ನನ್ನ ಮನೆಯಲ್ಲಿ ನನ್ನಷ್ಟೇ ಉದ್ದದ ನವಿಲುಗರಿ ಇದೆ ಎಂದು ಹೇಳಿ ಬೆರಗುಗೊಳಿಸುತ್ತಾನೆ. ತಾನು ನವಿಲ ಮೇಲೆ ಕುಳಿತು ಈಚೆ ಗುಡ್ಡದಿಂದ ಆಚೆ ಗುಡ್ಡಕ್ಕೆ ಹಾರಿದೆ ಎಂದು ಹೇಳತೊಡಗುತ್ತಾನೆ. ಹಾಗೆಲ್ಲ ಯಾಕೆ ಸುಳ್ಳು ಹೇಳುತ್ತೀಯಾ ಎಂದು ಕೇಳಿದರೆ ಆಚೆ ಗುಡ್ಡದಲ್ಲಿಯೇ ಕಾಡುಕೋಳಿ ಇರುವುದು. ಅಲ್ಲಿಗೆ ನಿಮ್ಮನ್ನು ದಾಟಿಸಬೇಕಿತ್ತು, ಅದಕ್ಕೇ ಹಾಗೆ ಹೇಳಿದೆ ಎಂದು ಹೇಳುತ್ತಾ ಕಾಡು ಕೋಳಿಯ ಕಥೆ ಬಿಚ್ಚಿಕೊಳ್ಳುತ್ತಾನೆ.

ಆ ದಿನ ಶಾಲೆ ಬಿಟ್ಟ ನಂತರ ಸುರೇಶ ಹಕ್ಕಿಗೂಡು ತೋರಿಸುತ್ತೇನೆ ಎಂದು ನನ್ನನ್ನು ಕರೆದ. ಯಾವ ಹಕ್ಕಿಯ ಗೂಡು ಎಂದು ನಾನು ಕೇಳಿದೆ. ಅದು ಬುಟ್ಟಿಯ ಹಾಗೆ ಹೆಣೆಯುವ ಬುಲ್ ಬುಲ್ ಹಕ್ಕಿಯ ಗೂಡು ಅಲ್ಲ ಎಂದ. ಹಾಗಾದರೆ ನೀನು ತೋರಿಸುವುದು ತೆಂಗಿನ ಗರಿಗಳಿಗೆ ತೂಗಾಡುತ್ತಾ ಇರುವ ಗೀಜಗನ ಗೂಡಾಗಿರಬೇಕು ಅಂದೆ. ಗೀಜಗನ ಹಕ್ಕಿಯ ಗೂಡು ಅಲ್ಲ ನೀನು ಅಂತಹ ಗೂಡನ್ನು ನೋಡಿಯೇ ಇಲ್ಲ ಎಂದು ನನ್ನಲ್ಲಿ ಕುತೂಹಲ ಹುಟ್ಟಿಸಿದ. ಹಕ್ಕಿಯ ಗೂಡು, ಹಕ್ಕಿಯ ಮರಿಗಳನ್ನೆಲ್ಲ ನೋಡುವುದು ನನಗೂ ಇಷ್ಟವೇ. ಆದರೆ ಹಕ್ಕಿಯ ಗೂಡಿನ ಹತ್ತಿರ ಹೋಗಿ ಹಕ್ಕಿಗಳಿಗೆ ತೊಂದರೆ ಕೊಡಬೇಡಿ ಎಂದು ಅಪ್ಪ ಆಗಾಗ ಹೇಳುತ್ತಿರುತ್ತಾರೆ. ಒಂದು ಸಾರಿ ಬುಲ್ ಬುಲ್ ಹಕ್ಕಿ ನಮ್ಮ ಮನೆಯ ಸಮೀಪದ ದಾಸವಾಳದ ಗಿಡದಲ್ಲಿ ಗೂಡು ಕಟ್ಟಿತ್ತು. ನಾನು ಅದು ಗೂಡು ಕಟ್ಟುವಾಗಿನಿಂದಲೇ ಸುಮ್ಮನೆ ನೋಡುತ್ತಿದ್ದೆ. ಕಡ್ಡಿ ಚೂರು, ಎಲೆಯ ತುಣುಕು, ಹತ್ತಿ, ಬಳ್ಳಿ, ಗರಿ ಹೀಗೆ ಏನೇನೋ ತಂದು ಗೂಡು ಕಟ್ಟುತ್ತಾ ಹೋಯಿತು. ನಂತರ ಗೂಡಿನಲ್ಲಿ ಮೊಟ್ಟೆ ಇಟ್ಟು ಮರಿಗಳೂ